* * *

ಬೆಳಕು ಹರಿಯಿತು. ರಾಜಧಾನಿ ಕಡೆ ಹೋಗುವ ಮುಖ್ಯ ಹೆದ್ದಾರಿಯಲ್ಲಿ ವಾಹನಗಳ ಓಡಾಟಕ್ಕೆ ಪೋಲೀಸರು ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಿದರು. ಪಾದಯಾತ್ರೆ ಆರಂಭವಾಗುವ ಹೊತ್ತಲ್ಲಿ ಮೂವತ್ತು ಸಾವಿರ ಜನರಿದ್ದರು. ಯಾತ್ರೆ ಜತೆ ಹೆಜ್ಜೆ ಹಾಕಲು ನೂರಾರು ಜನರು ರಸ್ತೆ ಇಕ್ಕೆಲಗಳಲ್ಲಿ ನಿಂತು ಎದುರು ನೋಡುತ್ತಿದ್ದರು.

ಪಾದಯಾತ್ರೆಯನ್ನು ಪ್ರೊಫೆಸರ್ ಪ್ರಭುದೇವ ಅವರ ಮಗಳು ಉದ್ಘಾಟಿಸಿ ಅಪ್ಪನ ಬಿಡುಗಡೆಗೆ ಒತ್ತಾಯಿಸಿ ಘೋಷಣೆ ಕೂಗಿದಳು. ಉತ್ಸಾಹದಲ್ಲಿದ್ದ ಪಾದಯಾತ್ರಿಗಳೂ ಹತ್ತಾರು ಸಲ ಘೋಷಣೆ ಕೂಗಿದರು. ಯಾತ್ರೆ ಒಂದೆರಡು ಕಿಲೋಮೀಟರು ಸಾಗುವಷ್ಟರಲ್ಲಿ ಹಳ್ಳ ಕೊಳ್ಳಗಳ ನೀರು ನದಿಯ ಜತೆ ಸೇರಿಕೊಳ್ಳುವಂತೆ ಸಾವಿರಾರು ಜನರು ಘೋಷಣೆ ಕೂಗುತ್ತ ಯಾತ್ರೆಯಲ್ಲಿ ಸೇರಿಕೊಂಡರು. ಘೋಷಣೆಗಳು ಮಗಿಲು ಮುಟ್ಟಿದವು.

ಪಾದಯಾತ್ರೆ ಮಹಾತ್ಮ ಗಾಂಧಿ ಮೈದಾನದಲ್ಲಿ ಕೊನೆಗೊಳ್ಳುವ ಹೊತ್ತಿಗೆ ಕನಿಷ್ಠ ಮೂರು ಲಕ್ಷ ಜನ ಯಾತ್ರೆ ಜತೆ ಇರುತ್ತಾರೆ ಎಂದು ಪೋಲೀಸರು ಅಂದಾಜು ಮಾಡಿದರು! ಯಾತ್ರೆಯಲ್ಲಿ ಸೇರಿಕೊಂಡವರಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರು, ವಿದ್ಯಾರ್ಥಿಗಳು, ರೈತರು, ಯುವಕರು, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಭಿಕ್ಷುಕರ ಪುನರ್ವಸತಿ ಕೇಂದ್ರಗಳಲ್ಲಿ ಇದ್ದವರನ್ನೂ ಕರೆತಂದು ಪಾದಯಾತ್ರೆಯಲ್ಲಿ ಸೇರಿಸಿದರು. ಸರ್ಕಾರದ ಬಗ್ಗೆ, ಮುಖ್ಯಮಂತ್ರಿ ಬಗ್ಗೆ ಅಸಹನೆ ಇದ್ದವರೆಲ್ಲರ ಪಾದಯಾತ್ರೆಯಲ್ಲಿ ಸೇರಿಕೊಂಡರು.

ಪ್ರೊ.ಪ್ರಭುದೇವ ಅವರ ಅಭಿಮಾನಿಗಳು, ಶಿಷ್ಯರು ಮೆರವಣಿಗೆಯ ಎರಡೂ ಬದಿಗಳಲ್ಲಿ ನಿಂತು ಘೋಷಣೆ ಕೂಗುತ್ತ ಯಾತ್ರೆಯನ್ನು ನಿಯಂತ್ರಿಸುತ್ತಿದ್ದರು. ಹೊತ್ತು ಏರುತ್ತಿದ್ದಂತೆ ಪಾದಯಾತ್ರಿಗಳ ಸಿಟ್ಟು ಬೈಗುಳ ರೂಪದ ಘೋಷಣೆಯಾಗಿ ಪರಿವರ್ತನೆಗೊಂಡವು. ಪ್ರಮುಖ ಟೀವಿ ಚಾನೆಲ್‌ಗಳಲ್ಲಿ ಪಾದಯಾತ್ರೆಯ ಲೈವ್ ಕವರೇಜ್ ಆಗುತ್ತಿತ್ತು. ಬಿರುಬಿಸಿಲನ್ನೂ ಲೆಕ್ಕಿಸದೆ ಜನರು ಪಾದಯಾತ್ರೆಯಲ್ಲಿ ಸೇರಿಕೊಳ್ಳುತ್ತಲೇ ಇದ್ದರು. ಎರಡು ಗಂಟೆ ಹೊತ್ತಿಗೆ ಪಾದಯಾತ್ರೆ ನಗರದ ಮಧ್ಯಭಾಗದ ಮಹಾತ್ಮ ಗಾಂಧಿ ಮೈದಾನ ತಲುಪಿತು. ಆದರೆ ಅದರ ತುದಿ ಇನ್ನೂ ಶ್ರೀಮಂಗಲದ ಟೋಲ್‌ನಿಂದ ಮೂರ್ನಾಲ್ಕು ಕಿಲೋ ಮೀಟರ್ ಮುಂದೆ ಬಂದಿದೆ ಎಂದು ಟೀವಿಗಳ ಬ್ರೇಕಿಂಗ್ ನ್ಯೂಸ್‌ನಲ್ಲಿ ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರತಿಭಟನಾ ಪಾದಯಾತ್ರೆ ನಡೆದಿರಲಿಲ್ಲ! ಜನರ ಆಕ್ರೋಶದ ಕಟ್ಟೆ ಒಡೆದಿದೆ. ಆಕ್ರೋಶಕ್ಕೆ ಪ್ರೊಫೆಸರ್ ಅವರ ಬಿಡುಗಡೆಯ ಒತ್ತಾಯವೊಂದೇ ಕಾರಣ ಅಲ್ಲ. ಸರ್ಕಾರದ ದುರಾಡಳಿತದ ವಿರುದ್ಧ ಬೇಸತ್ತವರೆಲ್ಲ ಯಾತ್ರೆಗೆ ಬಂದು ಸೇರಿಕೊಂಡಿದ್ದಾರೆ ಎಂದು ಎರಡು ಟೀವಿಗಳು ವಿವರಣೆ ನೀಡಿದವು. ಜನಾಕ್ರೋಶ ಮುಂದಿನ ಚುನಾವಣೆಯಲ್ಲಿ ಸರ್ಕಾರ ವಿರುದ್ಧದ ಮತಗಳಾಗಲಿವೆ ಎಂದು ಟೀವಿಯೊಂದು ಹೇಳಿ ನಂತರ ವಿಷಾದ ಸೂಚಿಸಿತು.

ಏರುಬಿಸಿಲ ಝಳಕ್ಕೆ ಪಾದಯಾತ್ರಿಗಳು ದಣಿದಿದ್ದರು. ಆದರೆ ಅವರ ಉತ್ಸಾಹ ಕಡಿಮೆ ಆಗಲಿಲ್ಲ.

ಮೃತ್ಯುಂಜಯ ಪಾದಯಾತ್ರೆಯ ಒಂದು ಮಗ್ಗುಲಲ್ಲಿ ಎಲ್ಲರ ಜತೆ ಹೆಜ್ಜೆ ಹಾಕುತ್ತಿದ್ದ. ಹಾಗೆ ಸಾಗುವಾಗ ಅವನ ಗಮನ ಯಾತ್ರೆಯಲ್ಲಿದ್ದ ಗಡ್ಡಧಾರಿ, ಕೃಶದೇಹಿ ವ್ಯಕ್ತಿಯೊಬ್ಬನ ಮೇಲೆ ನೆಟ್ಟಿತು. ಅವನನ್ನೇ ದಿಟ್ಟಿಸಿದ. ಅರೇ, ಸರ್! ಎಂಬ ಅವನ ಬಾಯಿಂದ ಹೊರಟಿತು.

ಅವರತ್ತಲೇ ನೋಡಿದ ಹೌದು ಅವರೇ ಅವನ ಮೆಚ್ಚಿನ ಸಾಹಿತಿ ಪ್ರೊ.ಪ್ರಭುದೇವ ಎನ್ನುವುದು ಖಚಿತವಾಯಿತು.

ಪ್ರಭುದೇವರ ತಲೆಯ ಕೂದಲು ಸಿಕ್ಕುಗಟ್ಟಿದ್ದವು. ಧರಿಸಿದ್ದ ಪ್ಯಾಂಟು, ಜುಬ್ಬಾ ಒಗೆದು ಎಷ್ಟು ದಿನಗಳಾಗಿದ್ದವೋ. ಎದೆಮಟ್ಟದ ದೊಡ್ಡ ಬಿದಿರ ದೊಣ್ಣೆಯನ್ನು ಊರುಗೋಲಿನಂತೆ ಹಿಡಿದಿದ್ದ ಪ್ರಭುದೇವ ಸುತ್ತಮುತ್ತ ಏನು ನಡೆಯುತ್ತಿದೆ ಎನ್ನುವುದರ ಪರಿವೇ ಇಲ್ಲದೆ ನಿರಾಳ ಭಾವದಲ್ಲಿ ಯಾತ್ರೆಯೊಂದಿಗೆ ಹೆಜ್ಜೆ ಹಾಕುತ್ತಿದ್ದರು!

●